ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಭದ್ರೆಯ ಚತುರೆ ರಾಣಿ

ಒಂದು ಸಂದಿಯಿಂದ ಕಣ್ಣು ಕೀಲಿಸಿ ನೋಡಿದರೆ ಹಿನ್ನೀರಿನ ಹಸಿರು ಹುಲ್ಲಿನ ಮೇಲೆ ಹುಲಿರಾಣಿ ಬಿದ್ದು ಉರುಳಾಡುತ್ತಿದ್ದಳು. ಇದೇ ಮೊದಲ ಸಲ ನಾನವಳನ್ನು ನೋಡಿದ್ದು. ಇವಳೇ ಈಗಲೂ ಭದ್ರಾ ಕಾನನದ ಹೆಸರಾಂತ ರಾಣಿ. ಆಕೆ ಸಂತೋಷದಿಂದ ಹುಲ್ಲಮೇಲೆ ಉರುಳಾಡಿದ್ದು ಎಂದು ನಾನು ಭಾವಿಸಿದ್ದು ತಪ್ಪಾಗಿತ್ತು. ತೆಗೆದ ಚಿತ್ರಗಳ ಸೂಕ್ಷ್ಮವಾಗಿ ನೋಡಿದಾಗ ಆಕೆಯ ಬಾಲದ ಮೇಲ್ಭಾಗದಲ್ಲಿ ಆಳದ ಗಾಯವಿರುವುದು ಕಂಡು ಬಂತು.

ಇಡೀ ಕಾಡಿನ ಓಡಾಟ ಮುಗಿಸುವಾಗ ಸಂಜೆ ಐದೂವರೆ ದಾಟುತ್ತಿತ್ತು. ಆರು ಗಂಟೆಯೊಳಗೆ ನಾವು ಸಫಾರಿ ಮುಗಿಸಿ ಅರಣ್ಯ ಇಲಾಖೆಯ ಮುಖ್ಯ ಗೇಟನ್ನು ದಾಟಬೇಕಿತ್ತು. ನಮಗಿದು ಇಷ್ಟವಾಗದ ವಿಷಯ. ಇಲ್ಲಿನ ಈ ನಿಯಮ ಮೀರುವಂತಿಲ್ಲ. ಈ ಗಳಿಗೆಯನ್ನು ನಾವು 'ಕೆಟ್ಟ ನಸೀಬು' ಎಂದೇ ಭಾವಿಸುತ್ತೇವೆ. ಏಕೆಂದರೆ ಭದ್ರಾ ಅಭಯಾರಣ್ಯದಲ್ಲಿ ಕತ್ತಲಾಗುವ ಸಮಯದಲ್ಲೇ ಹುಲಿಗಳ ಓಡಾಟ ಶುರುವಾಗುವುದು. ಆಗ ಕ್ಷಣ ಹೊತ್ತು ನಿಲ್ಲಲು ಸಮಯವೂ ಉಳಿದಿರುವುದಿಲ್ಲ. ಪಟ ತೆಗೆಯಲು ಬೇಕಾದ ಸೂಕ್ತ ಬೆಳಕೂ ಲಭ್ಯವಿರುವುದಿಲ್ಲ. ಇಂಥದ್ದೊಂದು ಫಜೀತಿ ಯಾವಾಗಲೂ ಖಾಯಮ್ಮಾಗಿ ಇದ್ದೇ ಇರುತ್ತದೆ. ಇಲ್ಲಿನ ಹುಲಿಗಳಿಗೆ ನಾವು ಕಾಡು ಬಿಟ್ಟು ತೊಲಗುವ ಹೊತ್ತು ಸ್ಪಷ್ಟವಾಗಿ ಗೊತ್ತಾಗಿರುವಂತೆ ಕಾಣುತ್ತದೆ.

ಮಧ್ಯಾಹ್ನದ ಹೊತ್ತು ಗಡದ್ದಾಗಿ ನಿದ್ದೆ ಬಾರಿಸುವ ಹುಲಿ, ಚಿರತೆಗಳು ಸಂಜೆಯ ಹೊತ್ತಿಗೆ ಪುರುಸೊತ್ತು ಮಾಡಿಕೊಂಡು ಬೇಟೆಗೆ ಹೊರಡುತ್ತವೆ. ಅಷ್ಟರಲ್ಲಿ ನಾವು ಜಾಗ ಖಾಲಿ ಮಾಡಿರುತ್ತೇವೆ. ಹೀಗೆ ಪ್ರತಿ ಸಲ ದೋಖಾ ಆಗುವುದು ಮಾಮೂಲು ಆಗಿ ಹೋಗಿದೆ. ಚಿತ್ರ ತೆಗೆಯಲು ಹೊರಟಾಗಿನ ಹುಮ್ಮಸ್ಸು, ಏನೂ ಸಿಗದೆ ಲಾಟರಿ ಹೊಡಕೊಂಡು ವಾಪಸ್ಸು ಬರುವಾಗ ನಿರುತ್ಸಾಹವಾಗಿ ಬದಲಾಗಿರುತ್ತದೆ. ಈ ಬಗೆಯ ನಿರಾಸೆಗಳು ಬಹಳಷ್ಟು ಸಲ ಆದರೂ ನಾವೇನು ಬುದ್ಧಿ ಕಲಿತಿಲ್ಲ. ನಮ್ಮ ಹಟದ ಪಯಣ ಮುಂದುವರೆಯುತ್ತಲೇ ಇರುತ್ತದೆ. ಈಗೀಗ ಇದು ದುರಭ್ಯಾಸವೂ, ಪೂರ್ಣ ಪ್ರಮಾಣದ ಚಟವೂ ಆಗಿ ಬಿಟ್ಟಿದೆ. ಆದರೆ ಇಲ್ಲಿಗೆ ಹೊಸದಾಗಿ ಕ್ಯಾಮೆರಾ ಹೊತ್ತು ತರುವ ತರುಣರ ಅವಸರ ನೋಡಲು ಮಜಾವಾಗಿರುತ್ತೆ. ಎಲ್ಲವೂ ಇವತ್ತೇ ಸಿಕ್ಕಿ ಬಿಡಬೇಕು ಎಂಬ ಉಮೇದಿನಿಂದ ಅವರು ಕುದಿಯುತ್ತಿರುತ್ತಾರೆ. ಆದರೆ ನಾವು ಎಣಿಸಿದಂತೆ ನಡೆಯಲು ಅವಕಾಶ ಕೊಡದಿರುವುದೇ ಫೊಟೋಗ್ರಫಿ ಮಾಯಾಜಾಲದ ಕರಾಮತ್ತು.